ಏನೇನು ಇದೆಯೋ ಅದೆಲ್ಲವನ್ನು ಅವರು ಮಾಡಿಸಿರುತ್ತಾರೆ, ಅದನ್ನೆಲ್ಲಾ ನಾನು ಕಳುಹಿಸಿಕೊಡುತ್ತೇನೆ. ಅವರೆಲ್ಲರೂ ಸ್ನೇಹಿತರು ಇದ್ದಾರೆ, ನಮ್ಮ ಎಸ್.ಎಸ್. ಪಾಟೀಲ್‌ರವರ ಮಗನ ಅಧ್ಯಕ್ಷತೆಯಲ್ಲಿ ನಡೆದಂತಹ ಒಂದು ಸಭೆ, ಅವರಿಗೂ ಕೂಡ ತಿಳಿದುಕೊಳ್ಳುವಂತಹ ಪ್ರಜ್ಞೆ ಇದೆ. ಶ್ರೀಮತಿ ಸೋನಿಯಾಗಾಂಧಿಯವರ ಕಾಗದ ಮತ್ತೊಂದರ ಬಗ್ಗೆ ಬೇಕಾಗಿಲ್ಲ, ಶ್ರೀಮತಿ ಸೋನಿಯಾ ಗಾಂಧಿಯವರು ನಮಗೆ ಮಾರ್ಗದರ್ಶನ ಮಾಡುವುದಕ್ಕೆ ಇದ್ದಾರೆ. ಅವರುಗಳು ಸೋನಿಯಾ ಗಾಂಧಿಯವರ ಮಾರ್ಗದರ್ಶನಕ್ಕೆ ಒಪ್ಪುವಂತಹ ಜನರಲ್ಲ. ಕಾಂಗ್ರೆಸ್ ಸಂಸ್ಕೃತಿಯ ಜನ ನಾವಿದ್ದೇವೆ, ಅವರು ಏನು ಹೇಳಿದರೂ ಅದನ್ನು ನಾವು ಕೇಳುವುದಕ್ಕೆ ತಯಾರಿದ್ದೇವೆ. ನಮ್ಮ ಪಕ್ಷವು ಸಹ ಕೇಳುತ್ತದೆ, ಅದನ್ನು ನಾನು ಕೇಳುವುದಕ್ಕೆ ತಯಾರಿದ್ದೇನೆ, ಅದು ಬೇರೆಯ ವಿಚಾರವಾಗಿದೆ. ಆದರೆ ಇವತ್ತು ಈ ಪತ್ರಿಕೆಯಲ್ಲಿ ಪ್ರಕಟವಾಗಿದೆ, ಸುಮಾರು ಹತ್ತಾರು ಪತ್ರಿಕೆಗಳು ಇದೆ, ಎಲೆಕ್ಟ್ರಾನಿಕ್ ಮೀಡಿಯಾ ಇವತ್ತು ಬಹಳ ಸ್ಟ್ರಾಂಗ್ ಇದೆ. ಇವುಗಳೆಲ್ಲವನ್ನು ತಾವು ತರಿಸಿಕೊಂಡು ನೋಡಬಹುದು. ಅವರು ಸಹ ಕೇಳಲಿ, ನಿಮಗೆ ಬೇಕಾದರೆ ಎಲ್ಲರಿಗೂ ಒಂದೊಂದು ಕ್ಯಾಸೆಟ್‌ನ್ನು ನಾನು ಕಳುಹಿಸಿಕೊಡುತ್ತೇನೆ. ನನಗೆ ಬೆಳಿಗ್ಗೆ ಈ ಪತ್ರಿಕೆಯನ್ನು ನೋಡಿ ಬಹಳ ಗಾಬರಿಯಾಯಿತು, ನಾವು ಯಾರಿಗೋ ಭಯಪಡಿಸಬೇಕು, ಮತ್ತೊಂದನ್ನು ಮಾಡಿಸಬೇಕೆಂದು ಇಲ್ಲ, ನಮ್ಮ ಸರ್ಕಾರದ ಕೆಲಸ ಜನರಿಗೆ ಸಂತೋಷಪಡಿಸುವುದೇ ಆಗಿದೆ. ಇದರ ಬಗ್ಗೆ ಯಾರೂ ಭಯ ಮತ್ತು ಗಾಬರಿಯನ್ನು ಪಟ್ಟುಕೊಳ್ಳುವುದು ಬೇಡ. ಮಾನ್ಯ ಅರಗಜ್ಞಾನೇಂದ್ರರವರು ಬಾಲದ ಬಗ್ಗೆ ಪ್ರಸ್ತಾಪವನ್ನು ಮಾಡಿದರು, ನಿಮಗೇನೋ ಅದು ಇತ್ತೋ ಏನೋ ನನಗೆ ಗೊತ್ತಿಲ್ಲ, ಬಾಲವನ್ನು ಕಟ್ ಮಾಡುತ್ತೇನೆಂದು ಪ್ರಸ್ತಾಪ ಮಾಡಿದರು. ನನಗಂತೂ ಆ ಕೆಲಸ ಬೇಕಾಗಿಲ್ಲ, ನಾನು ಎಲ್ಲರ ವಿಶ್ವಾಸವನ್ನು ತೆಗೆದುಕೊಳ್ಳುತ್ತೇನೆ. ಸಂಸ್ಕೃತದಲ್ಲಿ 'ಸಂತೋಷಂ ಜನೈತ್ ಪ್ರಜ್ಞಃ ತದೈಶ್ವರ ಪೂಜನಂ' ಎಂದು ಒಂದು ಶ್ಲೋಕ ಇದೆ, ಅಂದರೆ, "ನಿಮ್ಮನ್ನು ಸಂತೋಷಡಿಸುವುದೇ ಈಶ್ವರನ ಪೂಜೆ" ಎಂದು ಹೇಳಿ ನಾನು ಕೆಲಸವನ್ನು ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಮಗೆ ನಮಸ್ಕಾರವನ್ನು ಹೇಳುತ್ತಾ, ಈ ಬಗ್ಗೆ ಇಷ್ಟು ಮಾತನ್ನು ಹೇಳುವುದಕ್ಕೆ ಸಾಧ್ಯವೆಂದು ತಿಳಿಸುತ್ತಿದ್ದೇನೆ.

ಅಧ್ಯಕ್ಷರು : ಬಹುಶಃ ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳಿದ ಮೇಲೆ ಈಗಾಗಲೇ ತಮಗೆ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ಕನ್‌ಸೆಂಟ್ ಏನು ಕೊಟ್ಟಿಲ್ಲವಲ್ಲ, ನಾನು ಪುನಃ ಅದನ್ನು ಎತ್ತಿ ಹಿಡಿಯುತ್ತೇನೆಂದು ಹೇಳಿ ನನ್ನ ರೂಲಿಂಗ್‌ನ್ನು ಕೊಡುತ್ತೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಜಿ. ರಾಜುಗೌಡ (ಅಧ್ಯಕ್ಷರು, ಸರ್ಕಾರಿ ಭರವಸೆಗಳ ಸಮಿತಿ) : ಮಾನ್ಯ ಅಧ್ಯಕ್ಷರೇ, ನಾನು ಸರ್ಕಾರಿ ಭರವಸೆಗಳ ಸಮಿತಿಯ ಮೊದಲನೇ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.